ಅಧ್ಯಕ್ಷರು: ನಾಳೆಯೇ ತೆಗೆದುಕೊಳ್ಳೋಣ. ಏಕೆಂದರೆ, ಅಲ್ಲಿ ಫಂಕ್ಷನ್‌ಗೆ ಲೇಟಾಗುತ್ತದೆ ಎನ್ನುತ್ತಾರೆ. ನಿಮ್ಮ ಅಭಿಪ್ರಾಯವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಈ ಒಂದು ವಿಧೇಯಕವನ್ನು ತರತಕ್ಕಂಥ ಉದ್ದೇಶ, ಏನು ಹಿಂದೆ ಸನ್ಮಾನ್ಯ ಧರ್ಮಸಿಂಗ್‌ರವರೇ ಮುಖ್ಯಮಂತ್ರಿಗಳಾಗಿದ್ದಾಗ ಮರಳು ಲಾರಿಯವರ ಒಂದು ಸ್ಟ್ರೈಕ್ ಪ್ರಾರಂಭವಾದಂಥ ಸಂದರ್ಭದಲ್ಲಿ ಆ ಭಾಗದಲ್ಲಿರತಕ್ಕಂಥ ಎಲ್ಲಾ ನಮ್ಮ ಹಿರಿಯ ಸದಸ್ಯರುಗಳೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿರತಕ್ಕಂಥದ್ದು. ಅದರ ಜೊತೆಗೆ, ಇದು 10 ವರ್ಷಗಳಿಗೊಂದು ಸಾರಿ ಏನು ನಾವು ರಿವೈವ್ ಮಾಡಿದರೂ, 10 ವರ್ಷಗಳಲ್ಲಿ ನಾವೇನು ಕಾನೂನು ತಂದಿದ್ದೆವು, ಈ ಕಾನೂನಿನಡಿಯಲ್ಲಿ ಯಾರೇ ಒಬ್ಬ ಇವತ್ತು ಅವರ ಹಕ್ಕನ್ನು ಪಡೆಯಲಿಕ್ಕೆ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಯಾರಿಗೂ ಈ ಒಂದು ವಿಧೇಯಕದಿಂದ ಸರ್ಕಾರದಿಂದ ಇರಬಹುದು ಅಥವಾ ಈ ಒಂದು ವಿಧೇಯಕವನ್ನು ದುರುಪಯೋಗಪಡಿಸಿಕೊಂಡಂಥ ಘಟನೆಗಳು ಯಾವುದೂ ಇಲ್ಲದಿರುವುದರಿಂದ ಸನ್ಮಾನ್ಯ ಸದಸ್ಯರು ಇದರ ಬಗ್ಗೆ ಯಾವುದೇ ರೀತಿಯ ಒಂದು ಆತಂಕ ಪಡಬೇಕಾಗಿಲ್ಲ. ಇದು ಎಮರ್ಜೆನ್ಸಿ ಸಂದರ್ಭದಲ್ಲಿ ಉಪಯೋಗ ಮಾಡತಕ್ಕಂಥದ್ದಕ್ಕೇನಿದೆ, ಅದಕ್ಕೆ ದಯವಿಟ್ಟು ಸದನ ಒಪ್ಪಿಗೆಯನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಈಗ ಪರ್ಯಾಲೋಚನೆ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಇದನ್ನು ವಿರೋಧ ಮಾಡಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿಯವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"2005ರ ಕರ್ನಾಟಕ ಆತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 10ರವರೆಗೆ ಎರಡೂ ಸೇರಿದಂತೆ

ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು : "ಖಂಡ 2 ರಿಂದ 10ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"